ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 350 (444)

2. ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು)

3. ಉತ್ತರಿಸುವ ದಿನಾಂಕ : 10.12.2020

4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	2015ನೇ ಸಾಲಿನ ಗೆಜೆಟೆಡ್ ಪ್ರೋಬೇಷನರಿ ಪರೀಕ್ಷೆಯ ಉತ್ತರ ಪತ್ರಿಕೆಗಳಲ್ಲಿ ಅಭ್ಯರ್ಥಿಗಳ ಗುರುತು ಸಿಗುವಂತೆ "ಓಂ" "ಶ್ರೀ" ಇತ್ಯಾದಿ ಚಿಹ್ನೆಗಳನ್ನು ನಮೂದಿಸಿದ ಅಭ್ಯರ್ಥಿಗಳ ಸಂಖ್ಯೆ ಎಷ್ಟು;	ಓಂ, ಶ್ರೀ ಎಂದು ಚಿಹ್ನೆಗಳನ್ನು ಯಾವುದೇ ಅಭ್ಯರ್ಥಿಗಳು ನಮೂದಿಸಿರುವುದಿಲ್ಲ. ಆದರೆ ಬೇರೆ ರೀತಿಯಲ್ಲಿ ತಮ್ಮ ಗುರುತನ್ನು ಬಹುರಂಗಪಡಿಸಿದಂತಹ 05 ಅಭ್ಯರ್ಥಿಗಳ 07 ಉತ್ತರ ಪತ್ರಿಕೆಗಳನ್ನು ಅಸಿಂಧುಗೊಳಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.
ಆ)	ಕರ್ನಾಟಕ ಲೋಕಸೇವಾ ಆಯೋಗದ ಸೂಚನೆಗಳ ಪ್ರಕಾರ ಈ ರೀತಿ ಚಿಹ್ನೆಗಳನ್ನು ನಮೂದಿಸಿದ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಲು ಅನರ್ಹರಲ್ಲವೇ; ಈ ರೀತಿ ಅನರ್ಹರಾದವರ ಸಂಖ್ಯೆ ಎಷ್ಟು; ಇವರಲ್ಲಿ ಆಯ್ಕೆ ಆದವರ ಸಂಖ್ಯೆ ಎಷ್ಟು; (ಅಂತಹವರ ಹೆಸರು, ಆಯ್ಕೆಯಾದ ಹುದ್ದೆ, ವರ್ಗ ತಿಳಿಸುವುದು)	ಸದರಿ 05 ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಅಸಿಂಧುಗೊಳಿಸಲಾದ ಕಾರಣ ಸಂದರ್ಶನಕ್ಕೆ ಅರ್ಹರಾಗಿರುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.
ಇ)	ಕೆ.ಎ.ಟಿ ನ್ಯಾಯಾಲಯದ ತೀರ್ಪಿನ ಮೇಲೆ ಇವರಿಗೆ ಸಂದರ್ಶನಕ್ಕೆ ಅವಕಾಶ ಮಾಡಿ ಕೊಟ್ಟಿದಲ್ಲಿ, ಕರ್ನಾಟಕಾ ಲೋಕಸೇವಾ ಆಯೋಗದ ನಿಯಮ/ಸೂಚನೆಗಳನ್ನು ಉಲ್ಲಂಘಿಸಿದ ಕಾರಣ ಕೆ.ಎ.ಟಿ ತೀರ್ಪಿನ ಮೇಲೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಮೇಲ್ಮನವಿ ಸಲ್ಲಿಸಿಲ್ಲದಿರುವುದಕ್ಕೆ ಕಾರಣಗಳೇನು : (ವಿವರ ನೀಡುವುದು)	ಈ ಅಭ್ಯರ್ಥಿಗಳು ಮಾನ್ಯ ಕೆ.ಎ.ಟಿ. ಯಲ್ಲಿ ಅರ್ಜಿಯನ್ನೇ ಸಲ್ಲಿಸದಿರುವ ಕಾರಣ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಪ್ರಮೇಯವೇ ಉದ್ಭವಿಸುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.
ಈ)	ಇತರೆ ಪ್ರಕರಣದಲ್ಲಿ ಅಂದರೆ, 2015ನೇ ಸಾಲಿನ ಅಭ್ಯರ್ಥಿಗಳ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ನೀಡಲು, ರಾಜ್ಯ ಮಾಹಿತಿ ಆಯೋಗ, ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪು ನೀಡಿದ್ದರೂ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿಲ್ಲವೇಕೆ ; ಈ ರೀತಿಯ ತಾರತ್ಯಮ ಮಾಡುತ್ತಿರುವುದು ಸರಿಯೇ ?	ಈಗಾಗಲೇ ಆಯೋಗವು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ಪ್ರಕರಣ ಸಂಖ್ಯೆ: W.A. 491/2020 ರಲ್ಲಿ ಮೇಲನ್ಮವಿಯನ್ನು ದಾಖಲಿಸಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.

ಸಂಖ್ಯೆ: ಸಿಆಸುಇ 107 ಎಸ್‌ಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ